MR. SPEAKER:- You have given on time. They want some more time. Kindly co-operate.

ವಿಷಯ:- ಸಿರಸಿ ಪಟ್ಟಣಕ್ಕೆ ಒಳಚರಂಡಿ ಯೋಜನೆ.

274 (1944) ಶ್ರೀ ಪಿ.ಎಸ್. ಜಯವಂತ (ಶಿರ್ಶಿ ಸಿದ್ದಾಪುರ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿರ್ಶಿ ನಗರದಲ್ಲಿ ಒಳಚರಂಡಿ ಕಾಮಗಾರಿಯು ಯಾವ ವರ್ಷ ಪ್ರಾರಂಭವಾಯಿತು?

ಆ) ಯೋಜನೆಯ ಮೂಲ ಅಂದಾಜು ವೆಚ್ಚ ಎಷ್ಟು?

ಇ) ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು?

ಈ) ಈಗ ಯಾವ ಹಂತದಲ್ಲಿದೆ?

ಉ) ಯಾವಾಗ ಕಾರ್ಯಾರಂಭ ಮಾಡಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) 1972-73 ರಲ್ಲಿ ಪ್ರಾರಂಭವಾಯಿತು.

ಆ) ರೂ. 21.00 ಲಕ್ಷ.

ಇ) ರೂ. 28.98 ಲಕ್ಷ.

ಈ) ಮಂಜೂರಾದ ಅಂದಾಜಿನಂತೆ ಶಿರ್ಶಿ ನಗರದ ಆರು ಒಳಚರಂಡಿಗಳಲ್ಲಿ, ಐದು ಒಳಚರಂಡಿಗಳಲ್ಲಿಯ ಒಳಚರಂಡಿ ಸ್ಕ್ರೀನ್‌ವೇರ್ ಪೈಪುಗಳನ್ನು ಹಾಕುವ, ಮ್ಯಾನ್‌ಹೋಲ್ ಛೇಂಬರ್ ನಿರ್ಮಾಣ ಹಾಗೂ ಹೊರವಲಯಗಳಲ್ಲಿಯ ಕೊಳಾಯಿಗಳನ್ನು ಹಾಕುವ ಕಾಮಗಾರಿಗಳು 1978 ರಲ್ಲಿ ಮುಗಿದು ಮುಂದಿನ ನಿರ್ವಹಣೆಗಾಗಿ ಏಪ್ರಿಲ್ 1985ರಲ್ಲಿ ಪುರಸಭೆಗೆ ಹಸ್ತಾಂತರಿಸಲಾಗಿದೆ.

ಆಕ್ಸಿಡೇಷನ್ ಪಾಂಡ್ ಕಟ್ಟಲು 19 ಎಕರೆ ಜಮೀನು ಬೇಕಾಗಿದ್ದು ಪುರಸಭೆಯವರು ಸೂಕ್ತ ಹಾಗೂ ಸಾಕಷ್ಟು ಜಮೀನನ್ನು ಮಂಡಳಿಗೆ ಹಸ್ತಾಂತರಿಸಬೇಕಾಗಿದೆ.

ಉ) ಪುರಸಭೆಯವರು ಆಕ್ಸಿಡೇಷನ್ ಪಾಂಡ್ ಕಟ್ಟಲು ಜಮೀನನ್ನು ಕೊಟ್ಟ ತಕ್ಷಣ ಈ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಶ್ರೀ ಪಿ.ಎಸ್. ಜಯವಂತ್:- ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ 1972ನೇ ಇಸವಿಯಲ್ಲಿ ಈ ಕೆಲಸಗಳು ಆಗಿದೆ ಎಂದು ಹೇಳಿದ್ದಾರೆ. ಆದರಲ್ಲಿ 6 ಚರಂಡಿಗಳನ್ನು ಪೂರ್ತಿ ಮಾಡಿದ್ದಾರೆ. ಆಕ್ಸಿಡೇಷನ್ ಪಾಂಡ್ [illegible] ಆಗಬೇಕಾಗಿದೆ. ಈ ಒಂದು ಕಾಮಗಾರಿ ಪೂರ್ತಿಯಾಗದೇ ಸುಮಾರು 25 [illegible]ಗಳಲ್ಲಿ ಈ ಕಾರ್ಯಕ್ರಮ ಶಿರಸಿಯಲ್ಲಿ ನೆರವೇರುತ್ತಾ ಇಲ್ಲ. ಏಕೆ ನೆರವೇರುತ್ತಾ ಇಲ್ಲವೆನ್ನುವುದಕ್ಕೆ ಮಾನ್ಯಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಈ ಒಂದು ಒಳಚರಂಡಿ ಕಾಮಗಾರಿ 1972-73ರಲ್ಲಿ ಪ್ರಾರಂಭವಾಗಿ, 1978ರಲ್ಲೇ ಮುಗಿದು ಪುರಸಭೆಯವರಿಗೆ ವಹಿಸಿಕೊಟ್ಟಿದ್ದೇವೆ. ಇದರಲ್ಲಿ ಒಳಚರಂಡಿಗಳಿಗೆ ಸ್ಟೋನ್‌ವೇರ್ ಪೈಪುಗಳನ್ನು ಹಾಕಿ 4-5 ಕಡೆಗಳಿಂದ, ಅದನ್ನು ಒಂದು ಕಡೆ ತೆಗೆದುಕೊಂಡು ಹೋಗಿ, ಅಂತಿಮವಾಗಿ ಒಂದು ಆಕ್ಸಿಡೇಷನ್ ಪಾಂಡ್ ನಿರ್ಮಾಣ ಮಾಡಿ, ಅದರಲ್ಲಿ ಇದನ್ನು ಸ್ಟೋರೇಜ್ ಮಾಡಿ ಹೋಗುವಂಥ ವ್ಯವಸ್ಥೆ. ಅದರಲ್ಲಿ 19 ಎಕರೆ ಜಮೀನನ್ನು ಸ್ವಾಧೀನಪಡಿಸಿ, ತಮ್ಮ ಗಮನಕ್ಕೆ ಕೊಡುತ್ತೇವೆಂದು ಹಿಂದೆ ಒಪ್ಪಿದ್ದಾರೆ. ಆ 19 ಎಕರೆಗೆಯನ್ನು ಕೊಡಲಿಲ್ಲ. ಆ ಪುರಸಭೆಯವರು ಕೊಡಲಲ್ಲ, ಅದ್ದರಿಂದ [illegible] ಪಾಂಡ್ ಕಟ್ಟುವುದು ತಡವಾಗಿದೆ. ಮಿಕ್ಕ ಕೆಲಸಗಳನ್ನು ಮಾಡಿ, ನಾವು ಪುರಸಭೆಯವರಿಗೆ ವಹಿಸಿಕೊಟ್ಟಿದ್ದೇವೆ. 1985ರಲ್ಲಿ ಈ ಒಳಚರಂಡಿ ನಿರ್ವಹಣೆ ನೋಡಿಕೊಳ್ಳುವಂಥ ಕಾರ್ಯವನ್ನು ಆಯಾ ಪುರಸಭೆಗಳೇ ನಿರ್ವಹಿಸಬೇಕೆಂದು ಆಗ ಸರ್ಕಾರ ತೀರ್ಮಾನ ತೆಗೆದುಕೊಂಡಿತು. ಇವತ್ತು ಅದರಂತೆ ಆ ಪುರಸಭೆಯವರೇ ನಿರ್ವಹಿಸುತ್ತಿದ್ದಾರೆ. ಅವರು ನಮಗೇನಾದರೂ 19 ಎಕರೆ ಜಮೀನು ಕೊಟ್ಟರೆ, ಮುಂದೆ ಏನಾಗಬೇಕೋ ಆ ಕಾರ್ಯವನ್ನು ನಾವು ಮಾಡಿಕೊಡುತ್ತೇವೆ.

ಶ್ರೀ ಪಿ.ಎನ್. ಜಯವಂತ್:- ಸರ್ಕಾರದವರು ನಗರಸಭೆಯಿಂದ ಹಣವನ್ನು ವಸೂಲಾತಿ ಮಾಡುತ್ತಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ:- 25 ಸಾವಿರ ರೂಪಾಯಿ ಹಣ ತಾವೇನು ಕೊಟ್ಟಿದ್ದೀರಿ, ಅದನ್ನು ತಮ್ಮ ಪುರಸಭೆಗೇ ವಾಪಸ್ ಕೊಟ್ಟಿದ್ದೇವೆ. ತಾವು 19 ಎಕರೆ ಅಥವಾ 20 ಎಕರೆ ಜಮೀನು ಕೊಟ್ಟರೆ, ಅಲ್ಲಿ ನಾವು ಟ್ರೀಟ್‌ಮೆಂಟ್ ಪ್ಲಾಂಟ್ ಎಲ್ಲಾ ಕಟ್ಟಬೇಕಾಗುತ್ತದೆ, ರೀಸೈಕ್ಲಿಂಗ್ ಎಲ್ಲಾ ಆಗಬೇಕಾಗುತ್ತದೆ. ಆ ದೃಷ್ಟಿಯಿಂದ ಜಮೀನು ಒದಗಿಸಿಕೊಡಿ. ಮುಂದೆ ಆಗತಕ್ಕ ಯೋಜನೆಗಳನ್ನು ರೂಪಿಸಿ, ಆ ಕಾರ್ಯವನ್ನು ಮಾಡಿಕೊಡುತ್ತೇವೆ.

ಶ್ರೀ ಪಿ.ಎನ್. ಜಯವಂತ್:- ಅವರು ಪುರಸಭೆಗೆ ಹ್ಯಾಂಡ್ ಓವರ್ ಮಾಡಿದ್ದಾರೆಂದರೆ, ಇದು ಯಾವ ಲೆಕ್ಕ?

ಶ್ರೀ ಬಿ.ಎನ್. ಬಚ್ಚೇಗೌಡ:- ಅವರಿಗೆ ಹೇಳಬೇಕಾದರೆ, ಈ ಒಳಚರಂಡಿ ವ್ಯವಸ್ಥೆಯೂ ಎಲ್ಲಿಯೂ ನೂರಕ್ಕೆ ನೂರು ಭಾಗ ಅದನ್ನು ತೆಗೆದುಕೊಂಡು ಹೋಗಿ, ಟ್ರೀಟ್‌ಮೆಂಟ್ ಪ್ಲಾಂಟ್ ನಲ್ಲಿ ರೀಸೈಕ್ಲಿಂಗ್ ಎಲ್ಲಾ ಮಾಡಿ, ಮಾಡುತ್ತೇವೆಂದು ಹೇಳುವುದಿಲ್ಲ. ಬೆಂಗಳೂರಿನಲ್ಲಿಯೂ ಕೂಡ ಆಷ್ಟೆ. ನೀರು ಮತ್ತು ಸ್ಯೂವರೇಜ್ ಒಟ್ಟಿಗೆ ಹೋಗುವಂಥ ವ್ಯವಸ್ಥೆ. ಸುಮಾರು 60 ಭಾಗ ಈ ರೀತಿಯೇ ಮಾಡುವಂಥಾದ್ದು. ಇದನ್ನು ಏನು ಮಾಡುತ್ತೇವೆ ಎಂದರೆ, ಡೌನ್‌ಸ್ಟೀಮ್‌ಗೆ ತೆಗೆದುಕೊಂಡು ಹೋಗಿ, ಎಲ್ಲಿ ಬೇಕೋ ಅಲ್ಲಿ ಕಣಿವೆಗಳಲ್ಲಿ ಅದನ್ನು ಬಿಟ್ಟುಬಿಡುತ್ತೇವೆ. ಅದರಲ್ಲಿ ತಿಳಿಯಾದಂಥ ನೀರು, ಮತ್ತೆ ಸಾಗುವಳಿಗೆ ಬೇರೆ ಬೇರೆ ರೀತಿ ಹೊರಟು ಹೋಗುತ್ತದೆ. ಸಾಲಿಡ್ಸ್ ಏನಿದೆ, ಅದನ್ನು ರೈತರು ತೆಗೆದುಕೊಂಡು ಹೋಗಿ, ಬೇರೆ ಬೇರೆ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಾರೆ. ಆ ರೀತಿ

ವ್ಯವಸ್ಥೆ ಮಾಡಿ, ಸ್ಟೋರ್ ವೇರ್ ಪೈಪ್ ಹಾಕಿ, ಬೇರೆ ಬೇರೆ ಕಡೆ ತೆಗೆದುಕೊಂಡು ಹೋಗಿ ಬಿಟ್ಟಿದ್ದೇವೆ. ಅವರು ಹೇಳುವಂತಾದ್ದು, ಈ ಕಾರ್ಯ ಆಗಿಲ್ಲ ಉಳಿದಿದೆ ಎಂದು, ಅದನ್ನು ಮುಂದೆ ಮಾಡಿಸಿಕೊಡುತ್ತೇವೆ.

ವಿಷಯ:- ಬಳ್ಳಾರಿಯ ಲಾಲ್ ಬಹದ್ದೂರ್ ಶಾಸ್ತ್ರಿ ವಾಣಿಜ್ಯ ಸಂಕೀರ್ಣದ ಮಳಿಗೆಗಳ ಹಂಚಿಕೆ.

276 (1878) ಶ್ರೀ ಎಂ. ದಿವಾಕರ ಬಾಬು (ಬಳ್ಳಾರಿ ನಗರ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಲಾಲ್ ಬಹದ್ದೂರ್ ಶಾಸ್ತ್ರಿ ವಾಣಿಜ್ಯ ಸಂಕೀರ್ಣ (ಷಾಪಿಂಗ್ ಕಾಂಪ್ಲೆಕ್ಸ್)ದಲ್ಲಿ ವಿವಿಧ ಮಾದರಿಯ ವಾಣಿಜ್ಯ ಮಳಿಗೆಗಳನ್ನು ಹಂಚಿಕೆ ಮಾರಾಟ ಮಾಡಲು ಪ್ರಕಟಣೆ ನೀಡಲಾಗಿದ್ದಿದ್ದು ನಿಜವೇ?

ಆ) ಹಾಗಿದ್ದಲ್ಲಿ ಯಾವ ಯಾವ ಮಾದರಿಯ ಮತ್ತು ಎಷ್ಟೆಷ್ಟು ಅಳತೆಯ ಎಷ್ಟೆಷ್ಟು ನಿವೇಶನಗಳನ್ನು ಮಾರಾಟ ಮಾಡಲು ಪ್ರಕಟಿಸಲಾಗಿತ್ತು?

ಇ) ಇದಕ್ಕೆ ನೊಂದಣಿ ಶುಲ್ಕ ಎಷ್ಟು ರೂ.ಗಳನ್ನು ನಿಗದಿಮಾಡಿತ್ತು?

ಈ) ಎಷ್ಟು ಜನರು ಅರ್ಜಿಗಳನ್ನು ಸಲ್ಲಿಸಿದ್ದರು? ಎಷ್ಟು ಜನರಿಗೆ ಮಳಿಗೆಗಳನ್ನು ನೀಡಲಾಗಿದೆ? ಯಾವ ಷರತ್ತಿನ ಮೇಲೆ ನೀಡಲಾಗಿದೆ?

ಉ) ಮಳಿಗೆ ಹಂಚಿಕೆಯಾಗದವರ ನೋಂದಣಿ ಶುಲ್ಕ ಹಿಂದಿರುಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಊ) ಈ ವಾಣಿಜ್ಯ ಮಳಿಗೆಯನ್ನು ಪಾರ್ಕ್ (ದಿ ಗ್ರೀನ್ ಬೆಲ್ಟ್)ನಲ್ಲಿ ಕಟ್ಟುತ್ತಿರುವುದಕ್ಕೆ ಸರ್ಕಾರದಿಂದ ಭೂ ಬದಲಾವಣೆ ಮಾಡಲಾಗಿದೆಯೇ?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಹೌದು,

ಆ)

ಮಾದರಿ	ಮಹಡಿ	ಅಳತೆ	ಸಂಖ್ಯೆ
ಎ	ನೆಲ ಮಹಡಿ	16.9 x 16 ಅಡಿ	32
ಬಿ	ಅದೇ	11 x 13 ಅಡಿ	32
ಸಿ	ಮೊದಲ ಮಹಡಿ	16.9 x 13 ಅಡಿ	32
ಡಿ	ಮೊದಲ ಮಹಡಿ	11 x 13 ಅಡಿ	32